# ನಾರಾಯಣ ಗುರು

ಜಾತಿಭೇದ, ಮತದ್ವೇಷದಿಂದ ದೂರವಾದ ನಾರಾಯಣ ಗುರುಗಳ ಸ್ಮೃತಿಗಳು ಅರವಿಪುರಂ ಎನ್ನುವ ಊರಿನಲ್ಲಿವೆ. 1888ರಲ್ಲಿ ಕೇರಳದ ತಿರುವನಂತಪುರ ಬಳಿಯ ಶಂಕರಕುಂಡ ಎಂಬಲ್ಲಿ ಗುರುಗಳು ಶಿವಲಿಂಗವನ್ನು ಪ್ರತಿಷ್ಠಾಪಿಸುವ ಮೂಲಕ, ದಲಿತರಿಗೆ ದೇವಸ್ಥಾನವನ್ನು ಕಟ್ಟಿಸಿದರು. ನಂತರ ಅದು ಅರವಿಪುರಂ ಎಂಬ ಹೆಸರನ್ನು ಪಡೆಯಿತು. ಆ ಶಿವಲಿಂಗ ನಯ್ಯಾರು ನದಿಯಿಂದ ಹೆಕ್ಕಿ ತೆಗೆದ ಕಲ್ಲಾಗಿತ್ತು.

ಸಾಮಾಜಿಕ, ಧಾರ್ಮಿಕ, ವೈಚಾರಿಕ ಚಳವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ನಾರಾಯಣ ಗುರು ದೇವಸ್ಥಾನಗಳನ್ನು ಕಟ್ಟಿಸ ಹೊರಟಿದ್ದು ಎಂತಹ ಕ್ರಾಂತಿ ಎಂಬ ಪ್ರಶ್ನೆ ಏಳಬಹುದು. ಈ ಪ್ರಶ್ನೆಯ ಹಿಂದೆ ಅಸ್ಪೃಶ್ಯತೆ, ದೇವಸ್ಥಾನ ಪ್ರವೇಶ ನಿರ್ಬಂಧದಂತಹ ಸಮಸ್ಯೆಗಳಿವೆ. ದೇವರು, ಧರ್ಮವನ್ನು ಎಲ್ಲ ಸಮುದಾಯಕ್ಕೆ ಹೊಂದುವಂತೆ ವಿಶ್ಲೇಷಿಸುವುದು ಕಷ್ಟದ ಕೆಲಸ. ಹೀಗಾಗಿ ಮೊದಲ ಘಟ್ಟದ ವೈಚಾರಿಕ ಕ್ರಾಂತಿ ಜನಸಾಮಾನ್ಯರ ಬದುಕಿಗೆ ಹತ್ತಿರ ಆಗುವಂತೆ, ಅವರ ನಂಬಿಕೆಗಳಿಗೆ ಧಕ್ಕೆ ಬಾರದ ಹಾಗೆ ರೂಪಿಸುವುದು ಸವಾಲಿನ ಕೆಲಸವೇ ಸರಿ.

ಬ್ರಿಟಿಷ್ ಆಡಳಿತದ ಗುಲಾಮಿತನ, ಇನ್ನೊಂದೆಡೆ ಮೇಲು–ಕೀಳುಗಳಿಂದ ಕೂಡಿದ ಸಮಾಜವ್ಯವಸ್ಥೆ ಭಾರತೀಯರನ್ನು ದಿಕ್ಕುಗೆಡಿಸಿತ್ತು. ಇಂತಹ ಸಂದರ್ಭದಲ್ಲೇ ಚಂಬಳಂತಿ ಎಂಬ ಹಳ್ಳಿಯಲ್ಲಿ ಮಾಡಾನ್ ಆಶಾನ್ ಮತ್ತು ಹಾಗೂ ಕುಟ್ಟಿಯಮ್ಮ ದಂಪತಿಯ ಮಗನಾಗಿ ನಾರಾಯಣ ಗುರು ಜನಿಸಿದರು. ತಂದೆ ಆಯುರ್ವೇದ ವೈದ್ಯ; ಸಂಸ್ಕೃತ, ಮಲೆಯಾಳಂ ಹಾಗೂ ತಮಿಳು ಬಲ್ಲ ಪಂಡಿತರಾಗಿದ್ದರು. ಕೇರಳದಲ್ಲಿ ಕೆಳಜನಾಂಗಕ್ಕೆ ಸೇರಿದವರು ದೇವಸ್ಥಾನದಿಂದ, ಬ್ರಿಟಿಷ್ ಸರ್ಕಾರದ ಶಾಲೆಗಳಿಂದ ದೂರವೇ ಉಳಿದಿದ್ದರು. ಸ್ವಾತಿತಿರುನಾಳರ ಆಳ್ವಿಕೆಯ 1847ರ ಸರಿಸುಮಾರಿನಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಕೇರಳಕ್ಕೆ ಕಾಲಿಟ್ಟಿತು.

1859ರಲ್ಲಿ ಕೆಳಜನಾಂಗದ ಮಹಿಳೆಯರಿಗೆ ಕುಪ್ಪಸ ತೊಡುವ ಅವಕಾಶ ಸಿಕ್ಕಿತು. ಸಾರ್ವಜನಿಕ ರಸ್ತೆಯನ್ನು ಈ ವರ್ಗದವರು ಬಳಸುವಂತಿರಲಿಲ್ಲ. ಜಾತಿನಾಶ ಮಾಡಲೆತ್ನಿಸುವ ನಾಯರ್ ಜನಾಂಗದವರನ್ನು ಒಳಗೊಂಡಂತೆ ಈಳವರನ್ನು ನಾಯರ್ ಜನಾಂಗದವರು ಕೊಚ್ಚಿಹಾಕಬಹುದು. ಚಪ್ಪಲಿ, ಕೊಡೆಗಳನ್ನು ಬಳಸುವಂತಿಲ್ಲ. ಬೆಲೆಬಾಳುವ ವಸ್ತ್ರ, ಆಭರಣಗಳನ್ನು ಇವರು ತೊಡುವಂತಿಲ್ಲ. ಗಂಡಸರಿಗೆ ತಲೆಗಂದಾಯ ಹಾಗೂ ಮಹಿಳೆಯರಿಗೆ ಮೊಲೆಗಂದಾಯವನ್ನು ವಿಧಿಸಲಾಗಿತ್ತು. ಇದನ್ನು ವಿರೋಧಿಸಿ ನಂಗಲಿ ಎನ್ನುವ ಪ್ರದೇಶದಲ್ಲಿನ ಮಹಿಳೆಯೊಬ್ಬಳು ತನ್ನ ಮೊಲೆಗಳನ್ನು ಕತ್ತರಿಸಿ ತೆರಿಗೆಗೆ ಬದಲಾಗಿ ನೀಡಿದ ಕತೆ ಜನಜನಿತವಾಗಿದೆ.

ಶ್ರೇಷ್ಠರಾದ ನಂಬೂದರಿಗಳು ಹಾಗೂ ಕನಿಷ್ಠರಾದ ಈಳವರ ನಡುವೆ ನಾಯರ್‌ಗಳು ನಿಂತಿದ್ದರು. ನಾರಾಯಣಗುರು ಈಳವ ಜನಾಂಗದಲ್ಲಿ ಜನಿಸಿದರು. ಜಾತಿವ್ಯವಸ್ಥೆಯ ಕಾರಣಕ್ಕೆ ಸಮಾಜದಲ್ಲಿ ಹೊಂದಾಣಿಕೆ ಇಲ್ಲದಿದ್ದಾಗ ನಾರಾಯಣಗುರು ನೊಂದವರ ಪರವಾಗಿ ತಮ್ಮನ್ನು ತೊಡಗಿಸಿಕೊಂಡರು.

ಬಾಲ್ಯದಲ್ಲಿ ನಾಣು ಎಂದು ಕರೆಸಿಕೊಳ್ಳುತ್ತಿದ್ದ ಹುಡುಗ ತನ್ನ ಸುತ್ತಲಿನ ನಂಬಿಕೆಗಳ ಜಗತ್ತನ್ನು ಪ್ರಶ್ನೆ ಮಾಡುತ್ತಲೇ ಬೆಳೆದ. ಈ ಹುಡುಗ ತನಗಿಂತಲೂ ಶ್ರೇಷ್ಠರಾದವರನ್ನು, ಕನಿಷ್ಠರಾದವರನ್ನು ಅಟ್ಟಿಸಿಕೊಂಡು ಹೋಗಿ ಮುಟ್ಟುತ್ತಿದ್ದ. ಅವರೆಲ್ಲ ಮೈಲಿಗೆಯಾಯಿತೆಂದು ಕಿರುಚುವಾಗ ಅದನ್ನು ನೋಡಿ ಆನಂದಿಸುತ್ತಿದ್ದ. ದೇವರಿಗೆಂದು ಇಟ್ಟ ಹಣ್ಣುಹಂಪಲುಗಳನ್ನು ತಿನ್ನುತ್ತಿದ್ದ. 'ನಾನು ಸಂತೃಪ್ತನಾದರೆ ದೇವರು ಸಂತೃಪ್ತನಾದಂತೆಯೆ' ಎಂಬುದು ಅವನ ಮಾತಾಗಿತ್ತು. ಕ್ರಮೇಣ ಸನ್ಯಾಸದ ಕಡೆಗೆ ನಾಣುವಿನ ಮನಸ್ಸು ವಾಲಲಾರಂಭಿಸಿತು.

ಆಯುರ್ವೇದ ವಿದ್ಯೆಯನ್ನು ಕಲಿತು ಚಿಕಿತ್ಸೆ ಮಾಡಿದರು. ಪ್ರಸಿದ್ಧ ಯೋಗ ಪರಿಣತರಲ್ಲಿ ಯೋಗಾಭ್ಯಾಸ ಮಾಡಿದರು. ಕನ್ಯಾಕುಮಾರಿಯ ಸಮೀಪದ ಮರುತ್ವಾಮಲೆಯ ಗುಹೆಯಲ್ಲಿ ಅವರಿಗೆ ಜ್ಞಾನೋದಯವಾಯಿತು ಎಂದು ಹೇಳಲಾಗುತ್ತದೆ. ಕುರಾನಿನ ಬಗ್ಗೆ ಅವರ ಭಾಷಣಗಳನ್ನು ಕೇಳಿದ ಮುಸಲ್ಮಾನರು ಮೆಚ್ಚುಗೆಯಿಂದ ಹೊಗಳುತ್ತಿದ್ದರು. ಹೀಗೆ 'ನಾಣು' ನಾರಾಯಣ ಗುರುವಾಗಿ ಬೆಳೆದ ಕತೆ ಸರ್ವಜನಾಂಗದ ಶಾಂತಿಯ ತೋಟದ ಕತೆಯೇ ಆಗಿದೆ.

ಜ್ಞಾನೋದಯದ ನಂತರ ಕೇರಳ, ಮದ್ರಾಸ್ ಪ್ರದೇಶಗಳಲ್ಲಿನ ಹಳ್ಳಿಹಳ್ಳಿಗಳನ್ನು ಸುತ್ತಿದರು. ರೋಗದಿಂದ ನರಳುವವರಿಗೆ ಚಿಕಿತ್ಸೆ ನೀಡುತ್ತಿದ್ದರು. ಅಸ್ಪೃಶ್ಯರಿಗೆ ಆತ್ಮಸ್ಥೈರ್ಯ ತಂದುಕೊಡುವ ನಿಟ್ಟಿನಲ್ಲಿ ದೇವಸ್ಥಾನ ನಿರ್ಮಾಣ ಮಾಡಲು ಆರಂಭಿಸಿದರು. 'ನಿಮಗೆ ದೇವಸ್ಥಾನದ ಕಡೆಗೆ ಹೋಗಲಾಗದಿದ್ದರೆ ದೇವಸ್ಥಾನವನ್ನು ನಿಮ್ಮ ಬಳಿಗೇ ತರುತ್ತೇನೆ' ಎಂಬ ಧೈರ್ಯ ತುಂಬಿದರು. ಈ ಹಿನ್ನೆಲೆಯಲ್ಲಿಯೇ ಅವರು ನಿರ್ಮಿಸಿದ ಮೊದಲ ಕ್ಷೇತ್ರ ಅರವಿಪುರಂ ಆಗಿದೆ.

ಮುಂದೆ ಶಿವಗಿರಿ, ತ್ರಿಶೂರ್, ಕಣ್ಣಾನೂರು, ತಲಚೇರಿ, ಮಂಗಳೂರು ಸೇರಿದಂತೆ ಮೂವತ್ತು ಸ್ಥಳಗಳಲ್ಲಿ ದೇವಾಲಯಗಳನ್ನು ನಿರ್ಮಿಸಿದರು. ದೇವಾಲಯದ ಜೊತೆ ಗ್ರಂಥಾಲಯಗಳೂ ರೂಪುಗೊಂಡವು. ಆ ದೇವಾಲಯಗಳ ಆವರಣಕ್ಕೆ ಇರಬೇಕಾದ ಸ್ವಚ್ಛತೆ, ಗರ್ಭಗುಡಿಯ ದೇವತೆಗಳ ಕಲ್ಪನೆಗಳನ್ನು ಬದಲಾಯಿಸುವಲ್ಲಿ ಅವರು ತೋರಿದ ಆಸಕ್ತಿ ಮುಖ್ಯವಾದುದು.

ಕೆಳವರ್ಗಕ್ಕೆ ಸೇರಿದ ಪೊಲಯ, ಪರಯ ಜನಾಂಗದ ಹುಡುಗರಿಗೆ ವೇದ ಉಪನಿಷತ್ತುಗಳನ್ನು ಕಲಿಸಿ ಪೂಜಾವಿಧಿಗಳ ತರಬೇತಿ ಕೊಡಿಸಿದರು. ಹೀಗೇ ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿಯನ್ನು ಅಬ್ಬರವಿಲ್ಲದೆ ಅವರು ಮಾಡಿದರು.

ನಾರಾಯಣ ಗುರು ಕೆಳವರ್ಗದವರ ಆತ್ಮಸ್ಥೈರ್ಯಕ್ಕೆ ಕುಂದುಬಾರದಂತೆ ನೋಡಿಕೊಂಡರು. ಅವರ ಈ ಚಟುವಟಿಕೆಗಳಿಂದ ಕೇರಳದಲ್ಲಿ ಹೊಸ ಜಾಗೃತಿ ಉಂಟಾಗಿ ಅಸ್ಪೃಶ್ಯರು ಬೀದಿಯಲ್ಲಿ, ದೇವಸ್ಥಾನದ ಹೊರವಲಯದಲ್ಲಿ ಓಡಾಡುವಂತಾಯಿತು. ಶಾಲಾಕಾಲೇಜುಗಳಲ್ಲಿ ಪ್ರವೇಶ ಪಡೆಯುವ, ಓದುವ ಅವಕಾಶಗಳನ್ನು ಪಡೆದರು. 1936ರಲ್ಲಿ ಮೇಲ್ವರ್ಗದವರು ಕೆಳವರ್ಗದವರೊಡನೆ ಸೇರಿ ನಡೆಸಿದ 'ವೈಕಂ ಚಳವಳಿ'ಯಿಂದಾಗಿ ಎಲ್ಲ ಜಾತಿಯವರಿಗೂ ದೇವಸ್ಥಾನ ಪ್ರವೇಶ ದೊರೆಯಿತು.

'ಒಂದೇ ಜಾತಿ ಒಂದೇ ಮತ' ಎಂದು ನಾರಾಯಣ ಗುರು ಪ್ರತಿಪಾದಿಸುತ್ತಿದ್ದರು. ಸಂಘಟನೆಯ ಶಕ್ತಿಯನ್ನು ಅರಿತಿದ್ದ ಅವರು 'ಸಂಘಟನೆಯಿಂದ ಶಕ್ತರಾಗಿರಿ, ವಿದ್ಯೆಯಿಂದ ಸ್ವಾತಂತ್ರ್ಯ ಪಡೆಯಿರಿ' ಎಂಬ ಕರೆ ಕೊಟ್ಟರು. ನಾಲ್ಕೈದು ದಿನಗಳ ಕಾಲ ನಡೆಯುವ ಮದುವೆಗಳಿಗಿಂತ ಅರ್ಧ ಗಂಟೆಯಲ್ಲಿ ಸರಳವಾಗಿ ಮದುವೆ ಮಾಡುವ ಬಗ್ಗೆ ಒತ್ತು ಕೊಟ್ಟು ಮಾತನಾಡಿದರು. 114 ಕೃತಿಗಳನ್ನು ರಚಿಸಿದ್ದರೂ ಜನ ಅವರನ್ನು ಗುರುತಿಸುವುದು ಸಾಮಾಜಿಕ, ಧಾರ್ಮಿಕ ಕ್ರಾಂತಿಯ ಹರಿಕಾರರೆಂದೇ. ಕನ್ನಡದ ವಚನಕಾರರು, ಪೆರಿಯಾರ್ ಮತ್ತು ನಾರಾಯಣ ಗುರು ಅವರ ವೈಚಾರಿಕ ಕ್ರಾಂತಿಯ ದಟ್ಟ ಪ್ರಭಾವಗಳು ಕುವೆಂಪು ಯುಗದ ಸಾಹಿತ್ಯದ ಮೇಲೆ ಸ್ಪಷ್ಟವಾಗಿ ಗೋಚರಿಸುತ್ತವೆ.

■ **ಅಮೃತಮತಿ**

## ಮಾತೇ ಮುತ್ತು

- ಫಲಾಪೇಕ್ಷೆಯಿಂದ ಮಾಡಿದ ತ್ಯಾಗ ಗುಪ್ತದಾನ.
  —ನಾ. ಕಸ್ತೂರಿ
- ಕುರಿಯಂತೆ ನಡೆಯುವವರು ಬಹಳಷ್ಟು ಜನರು,/ ಗುರಿಯಿಟ್ಟು ನಡೆಯುವವರು ತುಂಬಾ ಕಡಿಮೆ.
  —ದ.ರಾ. ಬೇಂದ್ರೆ
- ಬೇರೆಯವರನ್ನು ತೆಗಳುವುದರಿಂದ ನಿಮ್ಮ ವ್ಯಕ್ತಿತ್ವಕ್ಕೇ ಹೆಚ್ಚು ಕುಂದುಂಟಾಗುತ್ತದೆ.
  —ಶಿವರಾಮ ಕಾರಂತ
- ಕರ್ತವ್ಯವನ್ನು ಕುರಿತು ಮೊದಲು ಯೋಚನೆ ಮಾಡಿ; ಹಕ್ಕುಗಳು ಆಮೇಲೆ ಬರಲಿ.
  —ಡಿ.ವಿ. ಗುಂಡಪ್ಪ
- ಸಾರ್ವಜನಿಕ ಬದುಕಿನಲ್ಲಿ ತೊಡಗಿರುವ ಪ್ರತಿಯೊಬ್ಬರೂ ಟೀಕೆ, ವಿಮರ್ಶೆ, ತಮಾಷೆಯನ್ನು ಎದುರಿಸಲು ಸಿದ್ಧರಾಗಿರಬೇಕು.
  —ಪಿ. ಲಂಕೇಶ್
- ಆಯಸ್ಸು ಮಿತ, ಆದರೆ ಚಿಂತೆ ಅಪಾರ.
  —ಉಮರ್ ಖಯ್ಯಾಂ